೧೯೮೦ ಡಿಸೆಂಬರ್ ಈಚೆಗೆ.—

ತೋಡಿರುವ ಕೊಳವೆ ಬಾವಿಗಳು ೩೩೪೭೬, ಅವುಗಳಲ್ಲಿ ನೀರು ದೊರಕಿದ ಬಾವಿಗಳು ೨೮೪೬೧ ಅವುಗಳಲ್ಲಿ ನೀರು ದೊರಕದ ಬಾವಿಗಳು ೪೮೦೫

ಈ) ಕೊಳವೆ ಬಾವಿಗಳಿಗೆ ಸ್ಥಳಗಳನ್ನು ಗುರುತಿಸಲು ಭೂ ವಿಜ್ಞಾನ ಹಾಗೂ ಭೂ ಬೌತ ವಿಜ್ಞಾನಗಳ ವಿಧಾನ ಅನುಸರಿಸಲಾಗುವುದು. ಕೊಳವೆ ಬಾವಿಗಳು ವಿಫಲವಾಗುವುದಕ್ಕೆ ಅನೇಕ ಕಾರಣ ಗಳುಂಟು. ಇವುಗಳು ಸ್ಥಳದಿಂದ ಸ್ಥಳಕ್ಕೆ ಬೇರೆ ಬೇರೆಯಾಗಿರುತ್ತೆ. ಅವುಗಳು ಈ ರೀತಿ ಇರುತ್ತವೆ.

೧ ಕರ್ನಾಟಕದ ಒಹುಭಾಗವು ಪುರಾತನಕಾಲದ ಸ್ಥಿರ ಶಿಲೆಗಳಿಂದ ಕೂಡಿದ್ದಾಗಿದೆ. ಈ ಸ್ಥಿರ ಶಿಲೆಗಳು ನಮ್ಮ ದೇಶದ ದಕ್ಷಿಣ ಭಾಗಕ್ಕೆ ಮಾತ್ರ ಸೀಮಿತವಾಗಿದೆ. ಈ ಶಿಲೆಗಳು ಸಾಮಾನ್ಯವಾಗಿ ಯಾವದೇ ತೆರನಾದ ಸಂದುಬಿರುಕುಗಳಿಂದ ಕೂಡಿರುವುದಿಲ್ಲ. ಆದ್ದರಿಂದ ಇದರಲ್ಲಿ ಭೂ ಜಲವು ಸಂಚಯವಾಗಲು ಸಾಧ್ಯವಾಗದ್ದರಿಂದ ನೀರು ಸಿಗುವುದಿಲ್ಲ.

೨ ನೀರಿನಾಂಶವಿರುವ ಕಲ್ಲಿನ ಅಥವಾ ಶಿಥಲವಾದ ಕಲ್ಲಿನಲ್ಲಿ ನಳಿಕೆಗಳನ್ನು ಹಾಕುವುದರಿಂದ ನೀರು ಬರುವ ಮಾರ್ಗ ತಡೆಯುವುದು.

೩ ಕುಡಿಯಲು ಯೋಗ್ಯವಾದ ನೀರು ಬಾವಿಯಲ್ಲಿ ಸಿಗದೇ ಇರುವುದರಿಂದ.

ಊ) ಈ ಕೊಳವೆ ಬಾವಿಗಳಿಗೆ ಜೋಡಿಸಿರುವ ೫೭೦೧೮ ಪಂಪುಗಳಲ್ಲಿ ೫೩೫೦೬ (ಆಗಸ್ಟ್‌ಕೊನೆಗೆ) ಕೆಲಸ ಮಾಡುತ್ತಿದೆ. ಉಳಿದ ಕೆಲವು ಪಂಪುಗಳಿಗೆ ದುರಸ್ತಿ ಕಾರ್ಯವನ್ನು ಮಾಡಲಾಗುತ್ತಿದೆ. ಹಿಂದೆ ಇಂಡಿಯಾ ಮಾರ್ಕ್ (೧೦) ಪಂಪುಗಳು ದೊರಕದೆ ಇದ್ದುದರಿಂದ ಸುಮಾರು ೨೬೫೦ ಕೊಳವೆ ಬಾವಿ ಗಳಿಗೆ ಆ ಸಮಯದಲ್ಲಿ ದೊರಕಿದ ಉತ್ತಮ ಪಂಪುಗಳನ್ನೇ ಜೋಡಿಸಲಾಗಿದೆ. ಈ ಪಂಪುಗಳನ್ನು ಕೊಳ್ಳಲು ಆಗಿರುವ ವೆಚ್ಚ ರೂ. ೨೮೦ ಲಕ್ಷ ಆಗೆ ಮಾರ್ಕೆಟ್‌ನಲ್ಲಿ ಲಭ್ಯವಿದ್ದ ಉತ್ತಮ ಪಂಪುಗಳನ್ನು ಕೊಳ್ಳಲಾಗಿರುವುದರಿಂದ ಖರ್ಚಿನ್ನು ಸಂಬಂಧಪಟ್ಟವರಿಂದ ವಸೂಲು ಮಾಡುವ ಪ್ರಶ್ನೆ ಉದ್ಭವಿ ಸುವುದಿಲ್ಲ.

ಶಿಕಾರಿಪುರ ಪ್ರಥಮ ದರ್ಜೆ ಕಾಲೇಜು ಅವ್ಯವಸ್ಥೆ ಬಗ್ಗೆ

೨೩೮ ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).— ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶಿಕ್ಷಣ ಮಂತ್ರಿಗಳು ದಯವಿಟ್ಟು ಉತ್ತರಿಸುವರೇ.—

ಅ) ಶಿಕಾರಿಪುರ ಮೊದಲನೇ ದರ್ಜೆ ಕಾಲೇಜು ಪ್ರಾರಂಭವಾಗಿ ೩ ವರ್ಷ ಕಳೆದರೂ ಅಲ್ಲಿಗೆ ಪೂರ್ಣ ಅವಧಿಯ ಉಪನ್ಯಾಸಕರನ್ನು ನೇಮಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ,

ಆ) ಈ ಕಾಲೇಜಿಗೆ ವಿದ್ಯಾರ್ಥಿಗಳು ಕಂಳಿತುಕೊಳ್ಳಲು ಬೆಂಚುಗಳು ಸಹ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ,

ಇ) ಆಫೀಸ್ ಸೂಪರಿಂಡೆಂಟ್ ಹುದ್ದೆ ಮಂಜೂರಾಗಿದ್ದರೂ ಈವರೆಗೆ ನೇಮಿಸದೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು),—

ಇಲ್ಲ, ನೇಮಕಾತಿ ಮಾಡಲಾಗಿದೆ.

ಇಲ್ಲ. ಆದರೆ, ಬೆಂಚುಗಳು ಸಾಕಷ್ಟಿಲ್ಲವೆಂದು ಗೊ....

ಮಂಜೂರಾದ ಸೂಪರಿಂಟೆಂಡೆಂಟ್ ಹುದ್ದೆಯನ್ನು ಹೊಸದಾಗಿ ಪ್ರಾರಂಭವಾದ ಧಾರವಾಡ ಪ್ರಾಂತೀಯ ಕಛೇರಿಗೆ ಸಾರ್ವಜನಿಕ ಹಿತದೃಷ್ಟಿಯಿಂದ ಸ್ಥಳಾಂತರಿಸಲಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೃಷಿ ಸಹಾಯಕರನ್ನು ನೇಮಿಸುವ ವಿಷಯದ ಬಗ್ಗೆ

೨೫೫ ಶ್ರೀ ಎನ್. ಶಿವರಾವ್ (ಬಂಟವಾಳ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ವ್ಯವಸಾಯ ಮಂತ್ರಿಗಳು ದಯವಿಟ್ಟು ಉತ್ತರಿಸುವರೇ.—